ESI.A.No.25/2022

RW-1,

ದಿನಾಂಕಃ 08-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಅರ್ಜಿದಾರರ ಪರವಾಗಿಃ ಶ್ರೀ. RS ವಕೀಲರಿಂದ

ಅರ್ಜಿದಾರರು ಸ್ವತಃ ಕೋಡ್ ನಂಬರ್ ಪಡೆಯಲು 2016 ರಲ್ಲಿ ನೊಂದಾವಣೆ ಮಾಡಿಕೊಂಡಿದ್ದರು. ಆಗ ಅವರು ಅಡ್ವಾನ್ಸ ಪೇಮೆಂಟ್ ಮಾಡಿರಲಿಲ್ಲ. ಶೋಕಾಸ್ ನೋಟೀಸನ್ನು 30-1-2017 ರಂದು ಕೊಟ್ಟಿದ್ದರು ಎಂದರೆ ನಿಜ. ನಾವು ಕ್ಲೇಮು ಮಾಡಿದ ಅವಧಿಯು ಫೆಬ್ರವರಿ 2016 ರಿಂದ ಡಿಸೆಂಬರ್ 2016 ಮತ್ತು ಜನವರಿ 2017 ರಿಂದ ಜುಲೈ 2018 ರವರೆಗೆ ಆಗಿರುತ್ತದೆ. ಅರ್ಜಿದಾರರ ಸಂಸ್ಥೆಯವರಿಗೆ ಯಾವುದೇ ವರ್ಕ ಆರ್ಡರ್ ಸಿಗದೇ ಇರುವುದರಿಂದ ಅವರು ಅರ್ಜಿದಾರ ಸಂಸ್ಥೆಯ ಕೆಲಸಗಳನ್ನು ಆರಂಭಿಸಲೇ ಇಲ್ಲ ಎಂದರೆ ಸಾಕ್ಷಿ ಅವರು ನಿಲ್ ಕಾಂಟ್ರಿಬ್ಯೂಷನ್ ರಿಟರ್ನನ್ನು ಫೈಲ್ ಮಾಡಬೇಕಾಗಿತ್ತು ಎಂದು ನುಡಿಯುತ್ತಾರೆ. ನಿಲ್ ಕಾಂಟ್ರಿಬ್ಯೂಷನ್ ಬಗ್ಗೆ ಅವರಿಗೆ ಮಾಹಿತಿಯೇ ಇರಲಿಲ್ಲ ಎಂದರೆ ಸಾಕ್ಷಿಯು ಖುದ್ದು ಸುನಾವಣೆಯ ಸಮಯದಲ್ಲಿ ಅದನ್ನು ಹೇಳಬಹುದಿತ್ತು ಎಂದು ನುಡಿಯುತ್ತಾರೆ. ಖುದ್ದು ಸುನಾವಣೆಗೆ ಅವರು ಹಾಜರಾಗಲೇ ಇಲ್ಲ ಆದ್ದರಿಂದ ಅವರಿಗೆ ಹೇಳಲು ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ. ಎರಡು ಅವಕಾಶಗಳನ್ನು ಅವರಿಗೆ ನೀಡಲಾಗಿತ್ತು. ದಿಃ7-12-2021 ರಂದು ಮತ್ತೊಂದು ಶೋಕಾಸ್ ನೋಟೀಸನ್ನು ಕೊಟ್ಟಿದ್ದೇವೆ ಎಂದರೆ ನಿಜ. ಆ ನೋಟೀಸಿನಲ್ಲಿ ಆಗಸ್ಟ 2018 ರಿಂದ ಮಾರ್ಚ 2021 ರವರೆಗೆ ಇ ಎಸ್ ಐ ವಂತಿಗೆಯನ್ನು ಪಾವತಿಸಬೇಕೆಂದು ಕೇಳಿದ್ದೇವೆ ಎಂದರೆ ನಿಜ. ದಿನಾಂಕಃ11-1-2021 ರಂದು ಅವರು ಖುದ್ದು ಸುನಾವಣೆಗೆ ಹಾಜರಾಗಿದ್ದರು ಎಂದರೆ ನಿಜ. ಆ ದಿನ ಅವರು ಫಾರಂ 26 ಎಎಸ್ ನ್ನು 2017 ರಿಂದ 2020-21 ರ ಅವಧಿಗೆ ಹಾಗೂ ಬ್ಯಾಂಕ್ ಸ್ಟೇಟ್ಮೆಂಟನ್ನು ಜನವರಿ 2018 ರಿಂದ ಸೆಪ್ಟಂಬರ್ 2020 ರವರೆಗೆ ಹಾಜರು ಮಾಡಿದ್ದರು ಎಂದರೆ ಅದು ಡಿಫಾಲ್ಟ್ ಅವಧಿ ಅಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರ ಸಂಸ್ಥೆಯು ಮುಚ್ಚಲ್ಪಟ್ಟಿದೆ ಎಂದು ನಿಶಾನೆ ಎ-8 ರಂತೆ ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿಯು ಅದು ನಮ್ಮ ಕಛೇರಿಗೆ ಡಿಫಾಲ್ಟ್ ಅವಧಿಯಲ್ಲಿ ತಲುಪಿರಲಿಲ್ಲ ಎಂದು ನುಡಿಯುತ್ತಾರೆ. ಖುದ್ದು ಸುನಾವಣೆ ಸಮಯದಲ್ಲಿ ಅದನ್ನು ಹಾಜರುಪಡಿಸಲಾಗಿತ್ತು ಎಂದರೆ ಸಾಕ್ಷಿ ಅದು ಡಿಫಾಲ್ಟ್ ಅವಧಿಗೆ ಸಂಬಂಧಪಟ್ಟದ್ದಲ್ಲ ಎಂದು ನುಡಿಯುತ್ತಾರೆ. ದಾಖಲೆಗಳನ್ನು ಪರಿಶೀಲನೆ ಮಾಡಿ 8/2018 ರಿಂದ 03/2021 ರವರೆಗೆ ವಂತಿಗೆಯನ್ನು ಪಾವತಿಸಬೇಕಾಗಿಲ್ಲ ಎಂದು ನಿಶಾನೆ ಎ-4 ರಂತೆ ಆದೇಶ ಮಾಡಿದ್ದೇವೆ ಎಂದರೆ ಸಾಕ್ಷಿ ಅದು ಈ ಕೇಸಿನ ಡಿಫಾಲ್ಟ್ ಅವಧಿಗೆ ಸಂಬಂಧಪಟ್ಟದ್ದಲ್ಲ ಎಂದು ನುಡಿಯುತ್ತಾರೆ. ನಿಶಾನೆ ಎ-4 ನ್ನು ನಾವೇ ನೀಡಿದ್ದೇವೆ ಎಂದರೆ ನನಗೆ ಮಾಹಿತಿ ಇಲ್ಲ. ಅರ್ಜಿದಾರರು ಡೀಫಾಲ್ಟ್ ಅವಧಿಯಲ್ಲಿ ಯಾವುದೇ ಕೆಲಸ ಮಾಡಿರಲಿಲ್ಲ ಆದ್ದರಿಂದ ಅವರು ಇ ಎಸ್ ಐ ವಂತಿಗೆಯನ್ನು ಪಾವತಿಸಲು ಬದ್ದರಲ್ಲ ಎಂದರೆ

ಸರಿಯಲ್ಲ. ಅರ್ಜಿದಾರರು ತನಗೆ ಯಾವುದೇ ಆದಾಯದ ಮೂಲಗಳಿಲ್ಲ ಆದ್ದರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕೆಲಸ ಮಾಡುತ್ತಿದ್ದೇನೆಂದು ನಿಶಾನೆ ಎ-13ರಂತೆ ಹೇಳಿದ್ದಾನೆ ಎಂದರೆ ನನಗೆ ಮಾಹಿತಿ ಇಲ್ಲ. ಅರ್ಜಿದಾರರ ಸಂಸ್ಥೆಯು ಮುಚ್ಚಿದೆ ಎಂದು ನಾವು ಸ್ಥಳ ತನಿಖೆ ಮಾಡಿ ವರದಿ ಕೊಟ್ಟಿಲ್ಲ ಎಂದರೆ ಸಾಕ್ಷಿ ಅರ್ಜಿದಾರ ಸಂಸ್ಥೆಯು ಮುಚ್ಚಿದೆ ಎಂದು ನಮಗೆ ಮಾಹಿತಿ ಬಂದಿರಲಿಲ್ಲ ಮತ್ತು ಶ್ರಂಸುವಿಧ ಪೋರ್ಟಲ್ನಲ್ಲಿ ಇನ್ಸೆಕ್ಷನ್ ಅಲಾಟ್ ಆದರೆ ಮಾತ್ರ ನಾವು ಹೋಗಬೇಕು ಎಂದು ನುಡಿಯುತ್ತಾರೆ. ಜನವರಿ 2022ರಲ್ಲಿ ಅರ್ಜಿದಾರರು ನಮ್ಮ ಸಂಸ್ಥೆ ಕ್ಲೋಸ್ ಆಗಿದೆ ಎಂದು ನಿಶಾನೆ ಎ-9ರಂತೆ ಅರ್ಜಿ ಕೊಟ್ಟರೂ ಕೂಡ ನಾವು ಪರಿಶೀಲನೆ ಮಾಡಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಕ್ಲೋಷರ್ ಡಾಕುಮೆಂಟ್ ಕೊಡಿ ಎಂದು ಕೇಳಿದ್ದೆವು. ಕ್ಲೋಷರ್ ಡಾಕುಮೆಂಟ್ಸ್ ಕೊಡಿ ಎಂದು ಅರ್ಜಿದಾರರ ಬಳಿ ಕೇಳಿದ್ದೀರಾ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಅಂತ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ನಿಜ. ನಾವು ದಾಖಲೆಯನ್ನು ಕೇಳಿದ್ದಲ್ಲಿ ಆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಿದ್ದೆ ಅದನ್ನು ಹಾಜರುಪಡಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ನೀಡದೆ, ದಾಖಲೆಗಳನ್ನು ಪರಿಶೀಲಿಸದೆ ಸುಳ್ಳು ಆದೇಶವನ್ನು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಆದೇಶ ಮಾಡಿದಂತೆ ಅರ್ಜಿದಾರರು ಇ ಎಸ್ ಐ ವಂತಿಗೆಯನ್ನು ಪಾವತಿಸಲು ಬದ್ಧರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.